**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 889/2021** ಸಿ.ಡಬ್ಲ್ಯೂ -3

ಪಿ.ಡಬ್ಲ್ಯೂ -1

ಹೆಸರು : ಶಿವಾನಂದ

ತಂದೆ:ಗಂಡ : ನೀಲಕಂಠರಾವ ಪಾಟೀಲ

ವಯಸ್ಸು : 36 ವರ್ಷ

ಉದ್ಯೋಗ : ಅಬಕಾರಿ ನೀರಿಕ್ಷಕರು ಕಲಬುರಗಿ

ವಾಸಸ್ಥಳ : ಕಲಬುರಗಿ

ದಿನಾಂಕ:10.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು ದಿ.06.01.2017 ರಿಂದ 24.11.2020 ರ ವರೆಗೆ ಆಳಂದ ಅಬಕಾರಿ ಇಲಾಖೆಯಲ್ಲಿ ಉಪನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

ದಿ.16.03.2020 ರಂದು ಆಳಂದ ಕಚೇರಿಯಲ್ಲಿದ್ದಾಗ ಒಂದು ಖಚಿತ ಬಾತ್ಮಿ ಬಂದ ಮೇರೆಗೆ ಚಾಸಾ-7 ರವರನ್ನು ಕರೆಯಿಸಿ ಪಂಚರನ್ನು ಕರೆಯಿಸಲು ತಿಳಿಸಿದೇನು. ನಂತರ ಪಂಚರು ಕಚೇರಿಗೆ ಬಂದ ಮೇಲೆ ನಮ್ಮ ಪರಿಚಯ ಹಾಗೂ ಸಿಬ್ಬಂದಿಗಳ ಪರಿಚಯ ಮಾಡಿಕೊಂಡ ಪಂಚರ ಹೆಸರು ಕೇಳಲಾಗಿ ಚಾಸಾ-1 ಎಂದು ತಿಳಿಸಿರುತ್ತಾರೆ. 1 ನೇ ಆರೋಪಿ ದ್ವಿಚಕ್ರ ವಾಹನ ಕೆಎ-32/ಜೆ-9057 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದ ಪ್ರಯುಕ್ತ ಪಂಚರಾಗಿ ಸ್ಥಳಿಯರು ಸಹಕರಿಸದೇ ಇದ್ದಾಗ ತಾವು ಪಂಚರಾಗಿ ಸಹಕರಿಸಲು ಕೇಳಿದಾಗ ಒಪ್ಪಿಕೊಂಡಿದ್ದು, ನಮ್ಮ ಖಾಸಗಿ ಗುತ್ತಿಗೆ ವಾಹನ ಕೆಎ-32/ಡಿ-3308 ರಲ್ಲಿ ಕುಳಿತು ಮುನ್ನೊಳ್ಳಿ ಗ್ರಾಮದ ಬಸ ನಿಲ್ದಾಣದ ಬಳಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆ ಮಾಡುವ ಸಮಯದಲ್ಲಿ ಒಂದು ಕೆಂಪು ಬಣ್ಣದ ದ್ವಿಚಕ್ರ ವಾಹನದ ಮೇಲೆ ಚೀಲವನ್ನು ಇಟ್ಟುಕೊಂಡು ಬರುತ್ತಿರುವುದು ಕಂಡು ಬಂದಿದ್ದು, ವಾಹನ ಸವಾರ ನಮ್ಮನ್ನುನೋಡಿ ಸ್ವಲ್ಪ ದೂರದಲ್ಲಿ ವಾಹನ ಮತ್ತು ಚೀಲ ಬಿಟ್ಟು ಓಡಿ ಹೋದನು. ಅವನನ್ನು ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ನಂತರ ಶೋಧನಾ ಪತ್ರ ತಯಾರಿಸಿ ಪಂಚರ ಸಮಕ್ಷಮ ವಾಹನದ ಮೇಲೆ ಇರುವ ಗೊಬ್ಬರ ಚೀಲ ತೆಗೆದು ನೋಡಲಾಗಿ ಮೂರು ರಟ್ಟಿನ ಪೆಟ್ಟಿಗೆ ಇರುವುದು ಕಂಡು ಬಂದಿರುತ್ತದೆ. ಆ ಪೆಟ್ಟಿಗೆ ತೆಗೆದು ನೋಡಲಾಗಿ 90 ಎಂಎಲನ 96 ತಲಾ 3 ಪೆಟ್ಟಿಗೆಗಳಲ್ಲಿ ಒಟ್ಟು 288 ಟೆಟ್ರಾ ಪ್ಯಾಕಗಳು ಇರುವುದು ಕಂಡು ಬಂದಿರುತ್ತದೆ. ಒಟ್ಟು 25.92 ಲೀಟರ ಮದ್ಯ ಪತ್ತೆ ಆಗಿರುತ್ತದೆ. ತಲಾ 2 ರಂತೆ ಮೂರು ಪೆಟ್ಟಿಗೆಗಳಿಂದ 6 ಟೆಟ್ರಾ ಪ್ಯಾಕ ರಾಸಾಯನಿಕ ಪರಿಕ್ಷೆಗೆ ತೆಗೆದು ಬಿಳಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ 437 ಎಂದು ಅರಗಿನಿಂದ ಸೀಲ್ ಮಾಡಿ ಮಾದರಿ ಮುದ್ರೆ ನಮೂನೆ ಹಾಗೂ ಮಾದರಿ ಚೀಟಿ ತಯಾರಿಸಿ ಪಂಚರು ಹಾಗೂ ನಾವು ಸಹಿ ಮಾಡಿ ಅಂಟಿಸಲಾಯಿತು. ತದನಂತರ ವಾಹನ ಹಾಗೂ ಮು.ವ ಊ.ಗಳನ್ನು ವಶಕ್ಕೆ ಪಡೆದು, ಘಟನಾ ಸ್ಥಳದ ಚಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ಆಳಂದ ಹೋಗುವ ರಸ್ತೆ, ಉತ್ತರಕ್ಕೆ ತಡಕಲ ರಸ್ತೆ ಇರುತ್ತದೆ. ಸ್ಥಳದಲ್ಲಿ ಪಂಚನಾಮೆಯನ್ನು 2.45 ರಿಂದ 3.45 ರ ವರೆಗೆ ಮಾಡಿ ಪಂಚನಾಮೆ ಬರೆದು ಓದಿ ಹೇಳಿ ಕೇಳಿ ಪಂಚರು ಹಾಗೂ ನಾವು ಸಹಿ ಮಾಡಿರುತ್ತೇನೆ. ನಂತರ ವಾಹನ ಮತ್ತು ಮು.ಮಾ.ಗಳನ್ನು ಕಚೇರಿಗೆ ತಂದು ಫರಾರಿ ವ್ಯಕ್ತಿಯ ಮೇಲೆ ಹಾಗೂ ವಾಹನ ಮಾಲೀಕನ ಮೇಲೆ ಪ್ರ.ವ.ವ. ದಾಖಲಿಸಿ ಸರ್ಕಾರಿ ತರ್ಪೆ ಫಿರ್ಯಾದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಅದೇ ದಿನ ಚಾಸಾ-7 ರವರ ಹೇಳಿಕೆ ಪಡೆಯಲಾಯಿತು.

ಸಾಕ್ಷಿಗೆ ಈಗ ಪ್ರ.ವ.ವ. ತೋರಿಸಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ)

ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಸರಕಾರಿ ತರಫೆ ಪಿರ್ಯಾದಿಯನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಸರಕಾರಿ ತರಫೆ ಪಿರ್ಯಾದಿಯನ್ನು ನಿಪಿ-2 ಎಂದು ಅದರಲ್ಲಿ ಇರುವ ಸಹಿಯನ್ನು ನಿಪಿ-2(ಎ) ಎಂದು ಗುರತಿಸಲಾಯಿತು. ಸಾಕ್ಷಿಗೆ ಈಗ ಶೋಧನಾ ಸಮುಚಿತ ಪತ್ರವನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಶೋಧನಾ ಸಮುಚಿತ ಆಧಾರವನ್ನು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಈಗ ಮಾದರಿ ಮುದ್ರೆಯ ನಮೂನೆಯನ್ನು ತೋರಿಸಿ ಅದರಲ್ಲಿ ಇರವ ಸಹಿಯನ್ನು ಮಾದರಿ ಮುದ್ರೆ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ 90 ಎಂಎಲನ ಒರಿಜನಲ ಚಾಯಸ ವಿಸ್ಕಿ 6 ಟೆಟ್ರಾ ಪ್ಯಾಕಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

**<u>ಪಾ. ಸವಾಲುಃ- ಆರೋಪಿ ಪರ ಕೆ.ಎಂ. ವಕೀಲರಿಂದಃ</u>**

ದಿ.16.03.2020 ರಂದು ಸಂಪೂರ್ಣವಾಗಿ ಲಾಕ ಡೌನ ಘೋಷಿಸಲಾಗಿತ್ತು ಎಂದರೆ ಸರಿ. ಆದ ಕಾರಣ ಯಾವ ಜನರು ಹೊರಗೆ ಬರುತ್ತಿರಲಿಲ್ಲ ಎಂದರೆ ಸರಿ. ಆರೋಪಿ ಮು.ಮಾ.ಗಳನ್ನು ಯಾವ ಅಂಗಡಿಯಿಂದ ತರುತ್ತಿದ್ದ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಮು.ಮಾ.ಗಳ ಮೇಲೆ ಇರುವ ತಯಾರಿಕೆಯಾದ ದಿನ ಹಾಗೂ ಎಕ್ಸಾಯರಿ ಡೆಟ ಪಂಚನಾಮೆಯಲ್ಲಿ, ವರದಿಯಲ್ಲಿ ನಮೂದಿಸಿರುವುದಿಲ್ಲ, ಸಾಕ್ಷಿ ಮುಂದುವರೆದು ಎಕ್ಸಾಯರಿ ಡೇಟ ಇರುವುದಿಲ್ಲ ಎಂದು ಹೇಳುತ್ತಾರೆ. ಲೇಬಲ ನಂಬರನ್ನೂ ಸಹ ನಮೂದಿಸಿರುವುದಿಲ್ಲ. ಪಂಚನಾಮೆಯನ್ನು ಗುನ್ಹೆ ಸ್ಥಳದಲ್ಲಿಯೇ ಅದೇ ದಿನ ಬರೆದಿರುತ್ತೇವೆ. ನಿಪಿ-4 ರಲ್ಲಿ ದಿ.19.04.2020 ಎಂದು ನಮೂದಿಸಿ ನಂತರ ಅದನ್ನು ತಿದ್ದುಪಡಿ ಮಾಡಿದ ಕಾರಣ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾಹನದ ಮೇಲೆ ಒಬ್ಬರೇ ಇದ್ದರು. ಸಾಮಾನ್ಯವಾ ಒಬ್ಬ ವ್ಯಕ್ತಿ ಮೂರು ಪೆಟ್ಟಿಗೆಗಳನ್ನುಇಟ್ಟುಕೊಂಡು ಸವಾರಿ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಓಡಿ ಹೊದ ವ್ಯಕ್ತಿ 1ನೇ ಆರೋಪಿ ಎಂದು ನನಗೆ ಬಾತ್ಮಿ ಬಂದ ಕಾರಣ ಗೊತ್ತಾಗಿರುತ್ತದೆ. ಓಡಿ ಹೊದ ವ್ಯಕ್ತಿ 1ನೇ ಆರೋಪಿ ಎಂದು ನನಗೆ ಬಾತ್ಮಿ ಬಂದ ಕಾರಣ ಗೊತ್ತಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಘಟನೆ ಅಗುವ 2 ಗಂಟೆ ಮುನ್ನ ನನಗೆ ಬಾತ್ಮಿ ಬಂದರುತ್ತದೆ. ಪಂಚರು ಕಚೇರಿಗೆ 2.30 ಗಂಟೆಗೆ ಬಂದಿರುತ್ತಾರೆ. ಇಬ್ಬರು ಪಂಚರು ಆಳಂದದ ನಿವಾಸಿಗಳು ಅಗಿದ್ದರು. ಪಂಚರನ್ನು ಚಾಸಾ-7 ರವರು ಕರೆದುಕೊಂಡು ಬಂದಿದ್ದರು. ನನಗೆ ಬಾತ್ಮಿ ನಿಖರವಾಗಿ 1.30 ಗಂಟೆಗೆ ಬಂದಿರುತ್ತದೆ. ಲಾಕ ಡೌನ ಇದ್ದ ಕಾರಣ ಮದ್ಯದ ಅಂಗಡಿಗಳು ಮುಚ್ಚಿದ್ದವು ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ಮದ್ಯವನ್ನು ಎಲ್ಲಿಂದ ತಂದಿದ್ದ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. 1ನೇ ಅರೋಪಿ ವ್ಯವಸಾಯ ಮಾಡುತ್ತಾನೆ ಎಂದು ಗೊತ್ತಿರುತ್ತದೆ. ಆರೋಪಿ ಅನಕ್ಷರಸ್ಥನಿದ್ದು ಕೂರಿ ಮೆಯಿಸುವ ಕೆಲಸ ಮಾಡುತ್ತಿದ್ದು, ಸರಾಯಿ ಮಾರಾಟ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ದ್ವಿಚಕ್ರ ವಾಹನ ನಡೆಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಲಾಕ ಡೌನ ಇದ್ದ ಕಾರಣ ಅಂಕಿ ಸಂಖ್ಯೆಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾ.ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ. ಸಾಮಾನ್ಯವಾಗಿ ಎಲ್ಲ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ.

ದಿ.16.03.2020 ರಂದು ಆಳಂದ ಕಚೇರಿಯಲ್ಲಿದ್ದಾಗ ಒಂದು ಖಚಿತ ಬಾತ್ಮಿ ಬಂದ ಮೇರೆಗೆ ಚಾಸಾ-7 ರವರನ್ನು ಕರೆಯಿಸಿ ಪಂಚರನ್ನು ಕರೆಯಿಸಲು ತಿಳಿಸಿದೇನು ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ನಂತರ ಪಂಚರು ಕಚೇರಿಗೆ ಬಂದ ಮೇಲೆ ನಮ್ಮ ಪರಿಚಯ ಹಾಗೂ ಸಿಬ್ಬಂದಿಗಳ ಪರಿಚಯ ಮಾಡಿಕೊಂಡ ಪಂಚರ ಹೆಸರು ಕೇಳಲಾಗಿ ಚಾಸಾ-1 ಎಂದು ತಿಳಿಸಿರುತ್ತಾರೆಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. 1ನೇ ಆರೋಪಿ ದ್ವಿಚಕ್ರ ವಾಹನ ಕೆಎ-32/ಜೆ-9057 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದ ಪ್ರಯುಕ್ತ ಪಂಚರಾಗಿ ಸ್ಥಳಿಯರು ಸಹಕರಿಸದೇ ಇದ್ದಾಗ ತಾವು ಪಂಚರಾಗಿ ಸಹಕರಿಸಲು ಕೇಳಿದಾಗ ಒಪ್ಪಿಕೊಂಡಿದ್ದು, ನಮ್ಮ ಖಾಸಗಿ ಗುತ್ತಿಗೆ ವಾಹನ ಕೆಎ-32/ಡಿ-3308 ರಲ್ಲಿ ಕುಳಿತು ಮುನ್ನೊಳ್ಳಿ ಗ್ರಾಮದ ಬಸ ನಿಲ್ದಾಣದ ಬಳಿ

ಸಂಶಯಾಸ್ಪದ ವಾಹನಗಳನ್ನು ತಪಾಸಣೆ ಮಾಡುವ ಸಮಯದಲ್ಲಿ ಒಂದು ಕೆಂಪು ಬಣ್ಣದ ದ್ವಿಚಕ್ರ ವಾಹನದ ಮೇಲೆ ಚೀಲವನ್ನು ಇಟ್ಟುಕೊಂಡು ಬರುತ್ತಿರುವುದು ಕಂಡು ಬಂದಿದ್ದು, ವಾಹನ ಸವಾರ ನಮ್ಮನ್ನುನೋಡಿ ಸ್ವಲ್ಪ ದೂರದಲ್ಲಿ ವಾಹನ ಮತ್ತು ಚೀಲ ಬಿಟ್ಟು ಓಡಿ ಹೋದನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಅವನನ್ನು ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಂತರ ಶೋಧನಾ ಪತ್ರ ತಯಾರಿಸಿ ಪಂಚರ ಸಮಕ್ಷಮ ವಾಹನದ ಮೇಲೆ ಇರುವ ಗೊಬ್ಬರ ಚೀಲ ತೆಗೆದು ನೋಡಲಾಗಿ ಮೂರು ರಟ್ಟಿನ ಪೆಟ್ಟಿಗೆ ಇರುವುದು ಕಂಡು ಬಂದಿರುತ್ತದೆ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಆ ಪೆಟ್ಟಿಗೆ ತೆಗೆದು ನೋಡಲಾಗಿ 90 ಎಂಎಲನ 96 ತಲಾ 3 ಪೆಟ್ಟಿಗೆಗಳಲ್ಲಿ ಒಟ್ಟು 288 ಟೆಟ್ರಾ ಪ್ಯಾಕಗಳು ಇರುವುದು ಕಂಡು ಬಂದಿರುತ್ತದೆ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಒಟ್ಟು 25.92 ಲೀಟರ ಮದ್ಯ ಪತ್ತೆ ಆಗಿರುತ್ತದೆ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ತಲಾ 2 ರಂತೆ ಮೂರು ಪೆಟ್ಟಿಗೆಗಳಿಂದ 6 ಟೆಟ್ರಾ ಪ್ಯಾಕ ರಾಸಾಯನಿಕ ಪರಿಕ್ಷೆಗೆ ತೆಗೆದು ಬಿಳಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ 437 ಎಂದು ಅರಗಿನಿಂದ ಸೀಲ್ ಮಾಡಿ ಮಾದರಿ ಮುದ್ರೆ ನಮೂನೆ ಹಾಗೂ ಮಾದರಿ ಚೀಟಿ ತಯಾರಿಸಿ2 ಪಂಚರು ಹಾಗೂ ನಾವು ಸಹಿ ಮಾಡಿ ಅಂಟಿಸಲಾಯಿತು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ತದನಂತರ ವಾಹನ ಹಾಗೂ ಮು.ವ ೂ.ಗಳನ್ನು ವಶಕ್ಕೆ ಪಡೆದು, ಘಟನಾ ಸ್ಥಳದ ಚಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ಅಳಂದ ಹೋಗುವ ರಸ್ತೆ, ಉತ್ತರಕ್ಕೆ ತಡಕಲ ರಸ್ತೆ ಇರುತ್ತದೆ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಸ್ಥಳದಲ್ಲಿ ಪಂಚನಾಮೆಯನ್ನು 2.45 ರಿಂದ 3.45 ರ ವರೆಗೆ ಮಾಡಿ ಪಂಚನಾಮೆ ಬರೆದು ಓದಿ ಹೇಳಿ ಕೇಳಿ ಪಂಚರು ಹಾಗೂ ನಾವು ಸಹಿ ಮಾಡಿರುತ್ತೇನೆ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ನಂತರ ವಾಹನ ಮತ್ತು ಮು.ಮಾ.ಗಳನ್ನು ಕಚೇರಿಗೆ ತಂದು ಫರಾರಿ ವ್ಯಕ್ತಿಯ ಮೇಲೆ ಹಾಗೂ ವಾಹನ ಮಾಲೀಕನ ಮೇಲೆ ಪ್ರ.ವ.ವ. ದಾಖಲಿಸಿ ಸರ್ಕಾರಿ ತರ್ಪೆ ಫಯಾ೯ದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಅದೇ ದಿನ ಚಾಸಾ-7 ರವರ ಹೇಳಿಕೆ ಪಡೆಯಲಾಯಿತು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ.ಸಿ ಆಳಂದ